MARCH 12, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಇಂದು, ವಿಶ್ವ ಮೂತ್ರಪಿಂಡ ದಿನ.** 'ಎಲ್ಲರಿಗೂ ಮೂತ್ರಪಿಂಡದ ಆರೋಗ್ಯ; ಜನರ ಬಗ್ಗೆ ಕಾಳಜಿ ವಹಿಸುವುದು, ಭೂ ಗ್ರಹದ ರಕ್ಷಣೆ' ಎಂಬ ಧ್ಯೇಯದಡಿ, ವಿಶ್ವ ಮೂತ್ರಪಿಂಡ ಆರೋಗ್ಯ ಜಾಗೃತಿ ದಿನವನ್ನು, ಇಂದು ವಿವಿಧೆಡೆ ಆಚರಿಸಲಾಗುತ್ತಿದೆ. ಡಯಾಲಿಸಿಸ್'ನಲ್ಲಿ, *ಅಲ್ಟ್ರಾ ಪ್ಯೂರ್ ವಾಟರ್* ತಂತ್ರಜ್ಞಾನ ಮತ್ತು ಸುಧಾರಿತ *ಫಿಲ್ಟ್ರೇಷನ್* ವಿಧಾನದ ಮೂಲಕ, ವಿಷ ಪದಾರ್ಥಗಳ ನಿವಾರಣೆ, ಹೃದಯದ ಸ್ಥಿರತೆ ಕಾಪಾಡುವಲ್ಲಿ ಹಾಗೂ, ಕಿಡ್ನಿ ಕಸಿಗಾಗಿ ಕಾಯುತ್ತಿರುವವರಿಗೆ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು, ಸಮುದಾಯವೂ ನೆರವಾಗಬೇಕು ಎಂಬ, ಕಾಳಜಿ ವ್ಯಕ್ತ ಪಡಿಸಲಾಗುತ್ತಿದೆ.

<><><>

**ಕಿಡ್ನಿ ಕಸಿಗಾಗಿ,** ರಾಜ್ಯದಲ್ಲಿ 5 ಸಾವಿರದ 9 ಜನ ಹೆಸರು ನೋಂದಾಯಿಸಿದ್ದಾರೆ. ಮೂತ್ರಪಿಂಡ ವೈಫಲ್ಯಕ್ಕೆ ಒಳಗಾಗುತ್ತಿರುವವರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ, ಕಿಡ್ನಿ ದಾನಕ್ಕೆ ಕುಟುಂಬಸ್ಥರ ಹಿಂದೇಟು, ಈ ಸಮಸ್ಯೆಯ ಉಲ್ಬಣಕ್ಕೆ ಕಾರಣ.

<><><>

**ಜೀವನ ಸಾರ್ಥಕತೆ ಸಂಸ್ಥೆ,** ಅಂಗಾಂಗಳ ಕೊರತೆ ನೀಗಿಸಲು, ಪ್ರಯತ್ನಿಸುತ್ತಿದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅಡಿ, ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿರುವ, ಕುಟುಂಬಗಳ ಸದಸ್ಯರಿಗೆ, ಉಚಿತವಾಗಿ ಕಿಡ್ನಿ ಕಸಿ ಚಿಕಿತ್ಸೆಗಳನ್ನು, ರಾಜ್ಯ ಸರ್ಕಾರ ಒದಗಿಸುತ್ತಿದೆ.

<><><>

**ರಾಜ್ಯದಲ್ಲಿ ಒಟ್ಟು 86 ಆಸ್ಪತ್ರೆಗಳು,** ಅಂಗಾಂಗ ಕಸಿಗೆ ನೋಂದಣಿಯಾಗಿವೆ. ಮೂತ್ರಪಿಂಡ ಕಸಿಗೆ 3 ಲಕ್ಷ, ಯಕೃತ್ ಕಸಿಗೆ 11 ಲಕ್ಷ, ಹೃದಯ ಕಸಿಗೆ 10 ಲಕ್ಷ, ಶ್ವಾಸಕೋಶ ಕಸಿಗೆ 15 ಲಕ್ಷ ಹಾಗೂ ಹೃದಯ ಮತ್ತು ಶ್ವಾಸಕೋಶ ಕಸಿಗೆ, 22 ಲಕ್ಷ ರೂಪಾಯಿ ಪ್ಯಾಕೇಜ್ ರಾಜ್ಯ ಸರ್ಕಾರ ನಿಗದಿ ಪಡಿಸಿದೆ.

<><><>

**'ಅಂಗಾಂಗಳ ಕೊರತೆ ಹಿನ್ನೆಲೆ,** ಹೆಚ್ಚಿನ ಸಂಖ್ಯೆಯಲ್ಲಿ ಜನ, ತಮ್ಮ ಅಂಗಾಂಗ ದಾನಕ್ಕೆ ಮುಂದಾಗುವಂತೆ', ಆರೋಗ್ಯ ಖಾತೆ ಸಚಿವ, ದಿನೇಶ ಗುಂಡೂರಾವ ಮನವಿ ಮಾಡಿದ್ದಾರೆ.

<><><>

**1930ರ ಮಾರ್ಚ್ 12 ರಂದು,** ಸಾಬರಮತಿ ಆಶ್ರಮದಿಂದ ಆರಂಭಿಸಿ, ಏಪ್ರಿಲ್ 6ರ ವರೆಗೆ, 24 ದಿನಗಳ ಕಾಲ, 3 ನೂರಾ 85 ಕಿಲೋಮೀಟರ್, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ, ಸತ್ಯಾಗ್ರಹಿಗಳು ಕ್ರಮಿಸಿ, ಬ್ರಿಟಿಷರ ವಿರುದ್ಧ ನಡೆಸಿದ, ಉಪ್ಪಿನ ಕರ ನಿರಾಕರಣೆಯ, ದಂಡಿ ಯಾತ್ರೆ, ಸ್ಮೃತಿ ದಿನವಿಂದು, ಸ್ವಾತಂತ್ರ್ಯ ಸೇನಾನಿಗಳ ಸಾಹಸ, ತ್ಯಾಗ ಮತ್ತು ರಾಷ್ಟ್ರಭಕ್ತಿಯನ್ನು, ದೇಶಾದ್ಯಂತ ಸ್ಮರಿಸಲಾಗುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ತಮ್ಮ ಶ್ರದ್ಧಾ ಸುಮನ ಅರ್ಪಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 30 ಸೆಕೆಂದುಗಳು**

<><><>

**'ಗ್ಲುಕೋಮಾ' – ಕಾಚ ಬಿಂದು, ಗಂಭೀರ ಕಣ್ಣಿನ ಕಾಯಿಲೆ.** "ದೃಷ್ಟಿಯ ಸದ್ದಿಲ್ಲದ ಕಳ್ಳ" ಎಂದು ಕರೆಯಲಾಗುತ್ತದೆ. ಪ್ರಸ್ತುತ ಮಾರ್ಚ್ ತಿಂಗಳನ್ನು, 'ಕಾರ್ಯನಿರ್ವಹಿಸುವ ಸ್ಥಳದಲ್ಲಿ, ಕಣ್ಣಿನ ಆರೋಗ್ಯ ರಕ್ಷಣೆ' ಮಾಸಿಕವನ್ನಾಗಿ ಆಚರಿಸಲಾಗುತ್ತಿದೆ. 'ನಿಮ್ಮ ಕಣ್ಣುಗಳ ದೃಷ್ಟಿ ಉಳಿಸಿಕೊಳ್ಳಿ' ಎಂಬ ಧ್ಯೇಯದೊಂದಿಗೆ, ಈ ತಿಂಗಳ 14ನೇ ತಾರೀಖಿನ ವರೆಗೆ, ವಿಶ್ವ ಗ್ಲುಕೋಮಾ ತಡೆ ಸಪ್ತಾಹದ ಅಂಗವಾಗಿ, ಜನ ಜಾಗೃತಿ ಕಾರ್ಯಕ್ರಮಗಳು, ಆಯೋಜಿತವಾಗಿವೆ.

<><><>

**ಉಡುಪಿ, ದಕ್ಷಿಣಕನ್ನಡ ಹಾಗೂ** ಉತ್ತರಕನ್ನಡ ಜಿಲ್ಲೆಗಳಲ್ಲಿ, ಶಾಖದ ಅಲೆ ಇಂದು ಹೆಚ್ಚಲಿದ್ದು, ಮುನ್ನೆಚ್ಚರಿಕೆ ವಹಿಸುವಂತೆ, ಭಾರತೀಯ ಹವಾಮಾನ ಇಲಾಖೆ, ಮುನ್ನೆಚ್ಚರಿಕೆ ನೀಡಿದೆ. 36 ದಶಾಂಶ 6 ಡಿಗ್ರಿ ಸೆಲ್ಸಿಯಸ್ ನಿಂದ, 37 ಡಿಗ್ರಿ ವರೆಗೆ ತಾಪಮಾನವಿರಲಿದ್ದು, ತೀವ್ರ ಉಷ್ಣಾಂಶದ ಹಿನ್ನೆಲೆ, ಸಾರ್ವಜನಿಕರು ಮುಂಜಾಗ್ರತೆ ವಹಿಸಿ, ಬಿಸಿಲಿನಲ್ಲಿ ಓಡಾಡದಂತೆ ಕೋರಿದೆ.

<><><>

**ಮಂಗಳೂರಿನಿಂದ, ಕೇರಳ ಹಾಗೂ ತಮಿಳುನಾಡನ್ನು** ಸಂಪರ್ಕಿಸುವ, 2 ರೈಲುಗಳು, ರಾಮೇಶ್ವರಂ–ಮಂಗಳೂರು ಎಕ್ಸ್‌ಪ್ರೆಸ್ ಮತ್ತು ತಿರುನಲ್ವೇಲಿ–ಮಂಗಳೂರು ಎಕ್ಸ್‌ಪ್ರೆಸ್‌ಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ತಮಿಳುನಾಡಿನ ತಿರುಚನಾಪಳ್ಳಿಯಲ್ಲಿ ಚಾಲನೆ ನೀಡಿದರು.

<><><>

**ಮಕ್ಕಳ ಅಕಾದೆಮಿ ಹಾಗೂ ಆಕಾಶವಾಣಿ** ಧಾರವಾಡ ಕೇಂದ್ರ ಪ್ರಸ್ತುತಪಡಿಸಿದ, "ಅರಳಲಿ ಬೆಳಕಿನ ನಾಳೆ", ರಜತ ಮಹೋತ್ಸವ, ಸರಣಿ ಕಾರ್ಯಕ್ರಮದ, ವಿಜೇತ ಕೇಳುಗರ, ಬಹುಮಾನ ಪ್ರದಾನ, ಗ್ರಂಥಕರ್ತರಿಗೆ ಗೌರವ ಸಮರ್ಪಣೆ ಸಮಾರಂಭ, ಧಾರವಾಡ ಆಕಾಶವಾಣಿ ಕೇಂದ್ರದ, ಶಾಲ್ಮಲಾ ಸಭಾಂಗಣದಲ್ಲಿ ಜರುಗಿತು. ಹಿರಿಯ ವಿಜ್ಞಾನಿ ಎಸ್.ಎಂ.ಶಿವಪ್ರಸಾದ, ಮಕ್ಕಳ ಅಕಾದೆಮಿ ಅಧ್ಯಕ್ಷ ರಾಜನ್ ದೇಶಪಾಂಡೆ, ಆಕಾಶವಾಣಿ ಧಾರವಾಡ ಕೇಂದ್ರದ, ತಾಂತ್ರಿಕ ವಿಭಾಗದ ಮುಖ್ಯಸ್ಥ ಅರುಣ ಪ್ರಭಾಕರ, ಕಾರ್ಯಕ್ರಮ ವಿಭಾಗದ ಮುಖ್ಯಸ್ಥ ಶರಣಬಸವ ಚೋಳಿನ ಹಾಗೂ ಸರಣಿ ಕಾರ್ಯಕ್ರಮದ ನಿರ್ಮಾತೃ, ಮಂಜುಳಾ ಪುರಾಣಿಕ ಸೇರಿದಂತೆ, ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

**ಧಾರವಾಡ ಲೋಕಸಭಾ ಕ್ಷೇತ್ರದ,** 'ಸಂಸದರ ಕ್ರೀಡಾ ಮಹೋತ್ಸವ 2025–26'ರ ಅಂಗವಾಗಿ, ನಾಳೆ ಹಾಗೂ ನಾಡಿದ್ದು, ಅಂತಿಮ ಕುಸ್ತಿ ಪಂದ್ಯಾವಳಿ, ಧಾರವಾಡದ ಕರ್ನಾಟಕ ಕಾಲೇಜು ಆವರಣದ, ಮೈದಾನದಲ್ಲಿ ಆಯೋಜಿತವಾಗಿದೆ. 'ಫಿಟ್ ಇಂಡಿಯಾ: ಖೇಲೋ ಇಂಡಿಯಾ' ಉಪಕ್ರಮದಡಿ, 'ಸಂಸದ್ ಖೇಲ್ ಮಹೋತ್ಸವ'ವನ್ನು ಎಲ್ಲ ಲೋಕಸಭಾ ಕ್ಷೇತ್ರಗಳ, ಯುವ ಕ್ರೀಡಾ ಪ್ರತಿಭೆಗಳನ್ನು, ಗುರುತಿಸಲು, ಸಂಘಟಿಸಲಾಗಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**